

ರಾಜಿ ಸಂಧಾನದ ನಂತರವೂ ದಂಪತಿ ಒಂದಾಗದಿದ್ದರೆ ವಿಚ್ಛೇದನಕ್ಕೆ ಅನುಮತಿಸಬೇಕು. ಪ್ರೀತಿ, ವಿಶ್ವಾಸ ಹೋದ ಮೇಲೆ ಮತ್ತೆ ಒಂದಾಗಲು ಸಾಧ್ಯವಿಲ್ಲ. ಪ್ರತಿ ವರ್ಷ ದೇಶದಲ್ಲಿ ಶೇ.15ರಿಂದ 20ರಷ್ಟು ಡಿವೋರ್ಸ್ ಕೇಸುಗಳು ಹೆಚ್ಚಾಗುತ್ತಿವೆ.

**-ಸುರೇಶ್,**

**ಅಧ್ಯಕ್ಷರು, ಫ್ಯಾಮಿಲಿ ಹಾರ್ಮೋನಿ ಸೊಸೈಟಿ**

ನಮ್ಮ ಮೇಲೆ ಕ್ರಿಮಿನಲ್ ಕೇಸ್ ಹಾಕಿ ಜೈಲಿಗೆ ಕಳುಹಿಸುತ್ತಾರೆ. ಆದರೆ, ನಾವು ಡಿವೋರ್ಸ್‌ಗೆ ಅರ್ಜಿ ಸಲ್ಲಿಸಿದರೆ ಇದನ್ನು ವಿರೋಧಿಸುತ್ತಾರೆ. ಯಾಕೆ ಈ ದ್ವಂದ್ವ ನಿಲುವು? ಪತಿ ಮೇಲೆ ಪತ್ನಿ ಕ್ರಿಮಿನಲ್ ಕೇಸ್ ಹಾಕಿದರೆ ಅಂತಹ ಪ್ರಕರಣಗಳಲ್ಲಿ ಡಿವೋರ್ಸ್‌ಗೆ ಅನುಮತಿಸಬೇಕು.

**-ರಾಘವೇಂದ್ರ ನಾಯಕ್,**

**ಸಾಫ್ಟ್‌ವೇರ್ ಎಂಜಿನಿಯರ್**

ಡಿವೋರ್ಸ್‌ಗೆ ಬಹಳಷ್ಟು ಪ್ರಕರಣಗಳಲ್ಲಿ ಪತ್ನಿಯರು ಒಪ್ಪುವುದಿಲ್ಲ. ಯಾಕೆಂದರೆ, ಅವರಿಗೆ ಅದು ಭಾವನಾತ್ಮಕ ವಿಷಯ. ಪತಿ ಜತೆ ಇರದಿದ್ದರೂ ಆತನೊಂದಿಗೆ ಭಾವನಾತ್ಮಕ ಸಂಬಂಧ ಇರುತ್ತದೆ. ಇಂತಹ ಬಾಂಧವ್ಯವವನ್ನು ಅಷ್ಟು ಸುಲಭವಾಗಿ ಹೇಗೆ ಬ್ರೇಕ್ ಮಾಡಲು ಸಾಧ್ಯ. ಹೀಗಾಗಿ, ಡಿವೋರ್ಸ್‌ಗೆ ಒಪ್ಪಿಗೆ ಕೊಡಲು ಬಹಳ ವರ್ಷ ಬೇಕು.

**-ಪುಷ್ಪಾ (ಹೆಸರು ಬದಲಿಸಲಾಗಿದೆ)**

**ಡಿವೋರ್ಸ್‌ಗೆ ಅರ್ಜಿ ಸಲ್ಲಿಸಿರುವವರು**